MR. SPEAKER.— "...precincts of the Assembly means and includes the chamber, the lobbies, the galleries and to such other places as the Speaker may, from time to time specify."

SRI D. DEVARAJ URS.— If that has been specified, whether it has been revoked. ನಿಮ್ಮ ಹಿಂದಿನವರು ಯಾವಾಗಲಾದರೂ ರಿವೋಕ್ ಮಾಡಿದ್ದಾರಾ? ನನಗೆ ಜ್ಞಾಪಕ ವಿದ್ದ ಹಾಗೆ ವಿಧಾನಸೌಧದ ಪಕ್ಕದಲ್ಲಿರುವ ಶಾಸಕರ ಭವನವೂ ಕೂಡ ಲೆಜಿಸ್ಲೇಚರ್ ಪ್ರೆಸಿಂಕ್ಟ್‌ನಲ್ಲಿ ಬರುತ್ತದೆ.

ಅಧ್ಯಕ್ಷರು.— ಅದನ್ನು ನಾನು ವೆರಿಫೈ ಮಾಡುತ್ತೇನೆ.

ಶ್ರೀ ಡಿ. ದೇವರಾಜ ಅರಸ್.— ಅದು ರೂಲ್ ಪ್ರಕಾರ ಆಗಿದ್ದರೆ ಮತ್ತು ನೋಟಿಫೈ ಮಾಡಿದ್ದರೆ then the whole arrests becomes within the precincts, Wheter the portico is within the precincts or not, depends on the previous notification. This is my point. Another point is, having arrested–I think the House was sitting–they could have informed the Chairman or the Speaker.

MR. SPEAKER.— Next item, presentation of petitions.

SRI AZEEZ SAIT.—Sir, Hon. Member Sri Madaiah was arrested along with us. Here there is no mention about his arrest. The Police Commissioner should have informed you.

MR. SPEAKER.—What I have received, I have placed before the House. I am not supposed to ask him whether he has arrested him or not arrested him. Next item, presentation of petitions.

PRESENTATION OF PETITIONS

SRI N.B. SIRDESAI.—Sir I present

i) Petition signed by Sri B. S. Soman and others regarding relief under the Land Reforms Act, Karnataka State to the serving and retired personnel of the Indian Army, Navy and Air Force.

ii) Petition signed by Sri Raja Somnathji Guru Mahant and others regarding enquiry into the death of Sadhu Raj Guru of Vittal Mutt in Mangalore Taluk and handing over the possession of the Estate to newly elected Sadhu.

MR. SPEAKER.—Petitions presented.

SRI K. RAMABHAT.—I present.

(i) ಮನೆ ಬಾಡಿಗೆ ಭತ್ಯ ಇತ್ಯಾದಿಗಳ ಬಗ್ಗೆ ಪುತ್ತೂರ್ ತಾಲ್ಲೂಕಿನ ಸಹಾಯ ಪೋಷಿತ ಪ್ರೌಢ ಶಾಲಾ ಅಧ್ಯಾಪಕರು ಸಹಿ ಮಾಡಿದ ಅರ್ಜಿಯನ್ನೊಪ್ಪಿಸುವೆನು.

(ii) ಪ್ರವಾಸ ಭತ್ಯ ಹಾಗೂ ಇತರ ವೆಚ್ಚ ಇತ್ಯಾದಿಗಳನ್ನು ಮಂಜೂರ್ ಮಾಡುವ ಬಗ್ಗೆ ಪುತ್ತೂರ್ ತಾಲ್ಲೂಕಿನ ಗ್ರಾಮ ಸಹಾಯಕರು ಸಹಿ ಮಾಡಿದ ಅರ್ಜಿಯೊಂದನ್ನು ಒಪ್ಪಿಸುವೆನು.

(ಈ) (i) ಶ್ರೀಮತಿ ಅನುಸೂಯ ಗಜಾನನ ಶರ್ಮ ಅವರು—ಈ ಮುಂದಿನ ಅರ್ಜಿಗಳನ್ನು ಒಪ್ಪಿಸುವುದು ಕಾಕಳಿ ರಸ್ತೆಗೆ ಸೇತುವೆಯೊಂದರ ನಿರ್ಮಾಣ ಕಾಮಗಾರಿಯ ಬಗ್ಗೆ ವನಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷರವರು ಸಹಿ ಮಾಡಿದ ಅರ್ಜಿಯನ್ನು ಒಪ್ಪಿಸುವೆನು.

(ii) ಸಿರಸಿ ತಾಲ್ಲೂಕಿನ ವನಹಳ್ಳಿ ಹಾಗೂ ಮೇಣಸಿ ಪ್ರದೇಶಗಳಲ್ಲಿರುವ ಆಸ್ಪತ್ರೆಗಳಿಗೆ ಪಶು ವೈದ್ಯಾಧಿಕಾರಿಯವರನ್ನು ನೇಮಿಸುವ ಬಗ್ಗೆ ವನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಸಹಿ ಮಾಡಿದ ಅರ್ಜಿಯನ್ನೊಪ್ಪಿಸುವೆನು.

(iii) ಬಾಳೆಕೊಪ್ಪ ಹಾಗೂ ಲಂಬಳ್ಳಿ ನಡುವಿನ ಲೋಕೋಪಯೋಗಿ ಇಲಾಖೆಯವರಿಗೆ ಸೇರಿದ ರಸ್ತೆಯನ್ನು ದುರಸ್ತಿಗೊಳಿಸುವ ಬಗ್ಗೆ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಯಂವಕ ಮಂಡಲಿ ಹೊಸ ತೋಟದ ಅಧ್ಯಕ್ಷರವರು ಸಹಿ ಮಾಡಿದ ಅರ್ಜಿಯನ್ನೊಪ್ಪಿಸುವೆನು.

(iv) ಕಕ್ಕಹಳ್ಳಿಗೆ ಮತಕಟ್ಟೆಯನ್ನು ಮಂಜೂರ್ ಮಾಡುವ ಬಗ್ಗೆ ವನಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಸಹಿ ಮಾಡಿದ ಅರ್ಜಿಯನ್ನೊಪ್ಪಿಸುವೆನು.

(ಉ) ಶ್ರೀ ಕರಿಬಸವನಗೌಡ ಅವರು—ನಂಜನಗೂಡು ತಾಲ್ಲೂಕಿನ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ನಂಜನಗೂಡು ತಾಲ್ಲೂಕಿನ ಗ್ರಾಮ ಪಂಚಾಯತಿಯ ಅಧ್ಯಕ್ಷರು ಸಹಿ ಮಾಡಿದ ಅರ್ಜಿಯನ್ನೊಪ್ಪಿಸುವೆನು.

MR. SPEAKER.—Petitions presented.

Motion of Thanks to Governor's Address

† ಶ್ರೀ ಆರ್. ಗುಂಡೂರಾವ್ (ಮಾನ್ಯ ಮುಖ್ಯಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಪಂದನೆಯನ್ನರ್ಪಿಸುವ ನಿರ್ಣಯದ ಮೇಲೆ ಅನೇಕ ಮಾನ್ಯ ಮಿತ್ರರು ಮಾತನಾಡಿದ್ದಾರೆ. ಹಾಗೆ ಮಾತನಾಡಿದ ಸಂದರ್ಭದಲ್ಲಿ, ಒಂದು ವರ್ಷದಲ್ಲಿ ನಡೆದ ಆಡಳಿತವನ್ನು ಕೆಲವರು ಕಟುವಾಗಿಯೂ ಮತ್ತೆ ಕೆಲವರು ಸರಳವಾಗಿಯೂ ಟೀಕೆ ಮಾಡಿದ್ದಾರೆ. ಕೆಲವರು ಸಲಹೆಗಳನ್ನೂ ನೀಡಿದ್ದಾರೆ. ಅವರು ಮಾಡಿರುವ ಅನೇಕ ಸಲಹೆಗಳನ್ನು ನನ್ನ ಮುಂದೆ ಇವೆ. ನಾವು ಸೋಮವಾರದ ದಿವಸ ರೈತರ ಸಮಸ್ಯೆಗಳ ವಿಷಯವಾಗಿಯೇ ಚರ್ಚೆ ಮಾಡುವುದಕ್ಕೆ ಸೇರುತ್ತಿದ್ದೇವೆ. ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವ ಕಾಲದಲ್ಲಿ ಮಾತನಾಡಿದ ಅನೇಕ ಸದಸ್ಯರು ರೈತರ ಬಗ್ಗೆ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಏನೋ ಸರ್ಕಾರ ಮಾಡಿದ ಆಜ್ಞೆಗಳನ್ನೆಲ್ಲಾ ಜಾರಿಗೆ ತಂದಿಲ್ಲ, ದೇಶದಲ್ಲಿ ಕಾನೂನು ಸ್ಥಿತಿ ಏನೋ ಅವ್ಯವಸ್ಥೆ ಆಗಿದೆ ಎಂದೂ, ಏನೋ ಹಿಂದಿನ ಯಾವ ಸರ್ಕಾರವೂ ತಪ್ಪು ಮಾಡೇ ಇಲ್ಲ ಅಥವಾ ಹಿಂದಿನ ಸರ್ಕಾರ ಏನೋ ಎಲ್ಲಾ ಒಳ್ಳೆಯ ಕೆಲಸಗಳನ್ನು ಮಾಡಿದ್ದು ಅದೆಲ್ಲಾ ಈ ಸರ್ಕಾರದಲ್ಲಿ ತಲೆಕೆಳಗಾಗಿದೆ, ಇದೆಲ್ಲಾ ಈ ಒಂದು ವರ್ಷದಲ್ಲಿ ಆಗಿಬಿಟ್ಟಿದೆ, ಹಿಂದಿನ ಸರ್ಕಾರದವರು ಏನೋ ರೈತರ ಮೇಲೆ ಎಷ್ಟು ಪ್ರೀತಿ ಇಟ್ಟುಕೊಂಡಿದ್ದರು, ಎಷ್ಟು ವಿಶ್ವಾಸವನ್ನು ಇಟ್ಟುಕೊಂಡಿದ್ದರು, ಎಷ್ಟು ಕಳಕಳಿಯನ್ನು ಇಟ್ಟುಕೊಂಡಿದ್ದರು, ಎಷ್ಟು ಅವರಿಗೆ ಕಂದಾಯವನ್ನು ರದ್ದು ಮಾಡಿದ್ದರು, ಬೆಟರ್‌ಮೆಂಟ್ ಲೆವಿ ರದ್ದು ಮಾಡಿದರು ಎಂದು, ಈಗಿನ ಸರ್ಕಾರ ರೈತರನ್ನು ಕಂಡರೆ ವಿರೋಧಿ ಸುತ್ತಾರೆನ್ನುವ ರೀತಿಯಲ್ಲಿ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಅವರು ಮಾತನಾಡಬೇಕು. ಅವರು ಮಾತನಾಡುವುದರ ಬಗ್ಗೆ ನನಗೆ ಬೇಜಾರೇನೂ ಇಲ್ಲ. ಆದರೆ ನಮ್ಮ ಪತ್ರಿಕೆ ಬಂದಾಗ ಒಂದು ಮಾತನಾಡುವುದು, ಈ ಸದನಕ್ಕೆ ಬಂದಾಗ ಏನೋ ತಮಗೆ ಒಂದು ಪ್ರಚಾರ ಸಿಗಬೇಕೆಂದು ಅಥವಾ ತಮಗೆ ಏನೂ ರಾಜಕೀಯದಲ್ಲಿ ನೆಲೆ ಇಲ್ಲವಲ್ಲಾ ಎಂದು ಅದನ್ನು ಬಲಪಡಿಸುವುದಕ್ಕಾಗಿ ಇಲ್ಲಿ ಒಂದು ಮಾತನಾಡುತ್ತಿದ್ದಾರೆ ಎಂದು ಹೇಳುವುದಕ್ಕೆ ನನಗೆ ನಿಜವಾಗಿಯೂ ವ್ಯಥೆಯಾಗುತ್ತದೆ. ಮಾನ್ಯ ಸದಸ್ಯರು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಲಿ. ನಾವು ಬೇಡ ಎಂದೇನೂ ಹೇಳುವುದಿಲ್ಲ. ಆದರೆ ಮಾಡಿರುವ ಸಹಾಯವನ್ನು ಇಲ್ಲಾ ಎಂದು ಸಾಧಿಸುವ ಪ್ರವೃತ್ತಿ ಏನಿದೆ ಅದನ್ನು ನಾನು ನಿಜವಾಗಿಯೂ ಖಂಡಿಸಲೇಬೇಕಾಗುತ್ತದೆ. ಇಪತ್ತು ನಾವು ಎಲ್ಲವನ್ನೂ ಸಾಧನೆ ಮಾಡಿದ್ದೇವೆಂದು ಹೇಳಂಪುದಕ್ಕೆ ಹೋಗುವುದಿಲ್ಲ. ಆದರೆ ಮಾಡಿರುವಂತಹ ಒಳ್ಳೆಯ ಕೆಲಸಗಳನ್ನು ಒಪ್ಪಿಕೊಳ್ಳುವ ಸೌಜನ್ಯವನ್ನು ಇಪತ್ತು ಅನೇಕ ಜನರು ವ್ಯಕ್ತ ಮಾಡದೇ ಹೋದರೆ, ಇದರಿಂದ ಯಾರನ್ನು ಪಡೆಯುತ್ತೇವೆ, ಇದರಿಂದ